ನೋಟಿಸ್.

1903ನೆ ಇಸವಿ ಆಗಷ್ಟು ತಿಂಗಳು 27ನೆ ತಾರೀಖಿನ IIನೆ ಭಾಗದ 467ನೆ ಪುಟದಲ್ಲಿ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟುಗಳ ಪಸಾರೆ ಜೆನಿಕ ಜಮೀವಣಿ ಹಕ್ಕನ್ನು ಹರಾಜು ಮಾಡಲ್ಪಡುತ್ತದೆಂದು ಘೋಷಿಸಾಗಿರುವದು ಸರಿಯಷ್ಟೆ. ಆದರೆ ಅವುಗಳಲ್ಲಿ ಮಳವಳ್ಳಿ ತಾಲ್ಲೂಕಿನ ಪಸಾರೆ ಜೆನಿಕ ಜಮೀವಣಿ ಹಕ್ಕನ್ನು 1903ನೆ ಇಸವಿ ನವಂಬರು 17ನೆ ತಾರೀಖಿನಲ್ಲಿ ಮಳವಳ್ಳಿ ತಾಲ್ಲೂಕು ಕಚೇರಿಯಲ್ಲಿ ಅಮಲ್ದಾರ್‌ರವರ ಮತ್ತು ರೇಂಜಾಫೀಸರವರ ರೂಬರೂ ಹರಾಜು ಹಾಕಲ್ಪಡುತ್ತಾಗಿ ಇದರಿಂದ ಯಲ್ಲರಿಗೂ ತಿಳಿಸಲ್ಪಟ್ಟಿದೆ.

ನೋಟೀಸು, ತಾರೀಖು 7ನೆ ನವಂಬರ್ 1903ನೆ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸರಗೂರು ಸೋಮೇಶ್ವರ ದಳಿಕಡು ಡಿಪೋದಲ್ಲಿ ಕಪಿಲಾನದೀ ನೀರಿನ ಕಳೆಯಿಂದ ಹೊಡದುಕೊಂಡುಬಂದ ಚವುಬೀನಾ ಹಕ್ಕುದಾರೀ ವಿಷಯದಲ್ಲಿ 1903ನೆ ಇಸವಿ ನವಂಬರು ಮಾಹೆ 12ನೆ ತಾರೀಖು ಮೈಸೂರು ಗೆಜೆಟ್ಟಿನ IIನೆ ಭಾಗದ 544ನೆ ಪೇಜನ್ನು ನೋಡತಕ್ಕದ್ದು.

ಸಿ. ಅಪ್ಪಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟ್.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 30ನೆ ಅಕ್ಟೋಬರ್ 1903ನೆ ಇಸವಿ.

ಕೋಲಾರ ತಾಲ್ಲೂಕು ಹುತ್ತೂರು ಹೋಬಳೀಗೆ ಸೇರಿದ ಮಾರ್ಜಿನ್ನಲ್ಲಿ ನಮೂದು ಮಾಡಿ ಇರತಕ್ಕ ಜೋಡಿ ಗ್ರಾಮಗಳು,

1. ಜೋಡಿ ಚಾಮರಹಳ್ಳಿ.
2. ಜೋಡಿ ಕೊಟ್ಟೂರು ಬನವಾಪುರ.

ಸದರಿ ಜೋಡಿದಾರ್ರುಗಳಿಂದ ಸರ್ಕಾರಕ್ಕೆ ಬರಬೇಕಾದ ಜೋಡೀ ಬಾಕೀಗೋಸ್ಕರವಾಗಿ, ಆ ತಾಲ್ಲೂಕು ಅಮಲ್ದಾರ್ರ ಕಚೇರಿಯಲ್ಲಿ 1903ನೆ ಇಸವಿ ಡಿಸೆಂಬರ್ ಮಾಹೆ 15ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತವೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟಿ ಇದೆ.

(ಹೆಚ್ಚಿನ ತಪಶೀಲ್ ಬಗ್ಗೆ 12ನೆ ಮುರ್ತುಂ 44ನೆ ನಂಬರ್ ಮೈಸೂರ ಗೆಜೆಟ್ಟಿನ 2ನೆ ಭಾಗದ 544—545—546ನೆ ನಂ ಬರು ಪೇಜು ನೋಡತಕ್ಕದ್ದು.)

ಎಫ್. ಸಿ. ಕಾರ್,
ಡೆಪ್ಯುಟಿ ಕಮಿಷನ[illegible]

ಮೈಸೂರು ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 3ನೆ ನವಂಬರ್ 1903.

1. ಕಂದಾಯದ ಬಾಕೀದಾರರಾದ ಜೋಡಿ ಹಾಲತ್ತಿ ಗ್ರಾಮದ ಶಾಂಭಟ್ಟ ವಗೈರೇ 18 ಜನರಿಂದ ಬರಬೇಕಾದ ಜಮ್ಮಾ ಕಂದಾಯದ ಬಾಕೀಗಾಗಿ ಇದರಡೀ ನಮೂದಾಗುವ ಸರ್ಕಾರಕ್ಕೆ ಶೇರಿಸಿಕೊಂಡ ಸ್ಥಿರಸ್ವತ್ತು ಮೈಸೂರು ಡಿಸ್ಟ್ರಿಕ್ಟು ನಾಗಮಂಗಲ ತಾಲ್ಲೂಕು ಜೋಡಿ ಹಾಲತ್ತಿ ಗ್ರಾಮದಲ್ಲಿ 1904ನೆ ಜನವರಿ 4ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿ ಇದೆ.

ಹರಾಜು ಸದರೀ ತಾರೀಖು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1903ನೆ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಪೀಲ್ ವೇರಿಗೆ 245—5—10 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಆದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ವಿಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನು ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಎಜಮಾನರಿಂದ ಸಹಿ ಮಾಡಲ್ಪಟ್ಟು ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯೂಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡೆಪ್ಯೂಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರನು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯೂಟಿ ಕಮಿಷನರವರಿಂದ ಸೈ ಮೊಹರ್ ಮಾಡಲ್ಪಟ್ಟು ಬಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಲಿತ್ಯಗಳಿಗೆ ಗವರ್ನ್ಮೆಂಟಿನವರು ಜವಾಬ್ದಾರ್ರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯೂಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾರ್ನೂನಿಂದ ವಿಧಿಸಲ್ಪಟ್ಟು ವಾಯಿದೆಯಲ್ಲಿ ಗವರ್ನ್ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲೆ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಬಾಕೀದಾರ್ರ ಹೆಸರು.	ಸ್ವತ್ತಿನ ತಪ್ಪೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜು ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕಿ, ತರೀ ಅಥವಾ ಬಾಗಾಯತು.	ವಿಸ್ತೀರ್ಣ.	ವರ್ಗಕಾರ.	ಸ್ವತ್ತಿನ ಕಿಮ್ಮತ್ತಿಗೆ ಬರಬೇಕಾದ ಸೋಟಿನ ಮೇಲೆ ಬಾಕೀ ವಸೂಲಿಗೆ ಸಹಿತವಾದ ಖರ್ಚಿನ ಮೊಬಲಗು.
							ಎ.	ಗು.	ರೂ. ಆ. ಪೈ.
ನಾಗಮಂಗಲ	ನಾಗಮಂಗಲ	ಜೋಡಿ ಹಾಲಪ್ಪ	ಖಾಂಪೌಂಡ್ ವಗೈರೆ 18 ಜನ್ನ	ರೂ. ಆ. ಪೈ.	ಪರಂಬೋಕು		498	22	... .
				...	ಖುಷ್ಕಿ		319	10	253 0 0
				..	ಬಾಗಾಯಿತು		8	20	25 0 0
							826	12	278 0 0
					ಅಂದಾಜು (1668-0-0)				

ರೂ.	ಆ.	ಪೈ.	
121	14	11	ಪ್ರವ
121	14	11	ಶುಭಕೃತು
0	8	0	ನೋಟಿಸ್ ಫೀ
0	8	0	ಜಪ್ತಿ ಫೀ
0	8	0	ಹರಾಜ್ ಫೀ
245	5	10	

ವಸೂಲ್ ತಾರೀಖು ವರೆಗೆ ಬಡ್ಡಿ ಬರಬೇಕು.

* ಯಾ ಬಾಕಿ ಇರುವವಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಎಂ. ಕಾಂತರಾಜೆ ಅರಸ್,
ಡೆಪ್ಯೂಟಿ ಕಮ್ಮಿಷನರ್.

ಬೆಂಗಳೂರು ಡಿವೀಜ್ ಡಿಸ್ಟ್ರಿಕ್ಟ್, ಜಡ್ಜ್ರವರ ಕೋರ್ಟಿನಲ್ಲಿ.

ಸ್ ೧೯೦೩—೧೯೦೪ನೆ ಇಸವಿ ಅರ್ಜೀ ನಂಬರ್ 105.

ಮೃತಪಟ್ಟ ಸುಬ್ಬಣ್ಣನೆಂಬವರ ಆಸ್ತೀ ವಿಷಯದಲ್ಲಿ—

ಅರ್ಜಿದಾರರು ಬೆಂಗಳೂರು ಕೊಟಗೆಯಲ್ಲಿರುವ 1ನೆ ಸುಬ್ಬಯ್ಯ, 2ನೆ ರಾಮೈಯ್ಯ, 3ನೆ ಅಶ್ವತ್ಥನಾರಾಯಣಿ, 4ನೆ ಕೃಷ್ಣ, (2-3-4) ಮೈನರ್, ಗಾರ್ಡಿಯರ್ ತಾಯಿ ಅಚ್ಚಮ್ಮ, ಮೃತಪಟ್ಟ ಸದರೀ ಸುಬ್ಬಣ್ಣನವರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿಯ ಮೇಲೆ ಮಾಗಡಿ ತಾಲ್ಲೂಕು ತಾವರೆಕೆರೆಯಲ್ಲಿ ವಾಸಸ್ಥರಾಗಿ ಮೃತಪಟ್ಟ ಸುಬ್ಬಣ್ಣನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ನ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ಮಾಡಿರುತ್ತಾರೆ.